**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 31.07.2024

ಮು. ಪಾಟಿ ಸವಾಲು : ಪ್ರತಿವಾದಿ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಮತ್ತು 1 ರಿಂದ 6ನೇ ಪ್ರತಿವಾದಿಯರು ಸೇರಿಕೊಂಡು ರಾಜಿ ಮಾಡಿಕೊಂಡಿರುತ್ತೇವೆಂದು ಬರೆಸಿರುವುದಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು, 4 ಮತ್ತು 6ನೇ ಪ್ರತಿವಾದಿಯರು ಸೇರಿಕೊಂಡು ರಾಜಿ ಇತ್ಯರ್ಥ ಮಾಡಿಕೊಳ್ಳಲು ಒಪ್ಪಿಗೆ ನೀಡಿರುತ್ತೇವೆಂದು ಬರೆಸಿರುವುದಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ ನಿಗದಿಯಾಗಿದ್ದು ಅದರಂತೆ ನಾನು, 4 ಮತ್ತು 6ನೇ ಪ್ರತಿವಾದಿಗಳು ನೋಂದಣಿ ಕಛೇರಿಗೆ ಹೋಗಿ ಸಹಿ ಮಾಡಿರುತ್ತೇವೆಂದು ಬರೆಸಿರುವುದಿಲ್ಲ.

ಆ ದಿನ ನಾನು, 4 ರಿಂದ 6ನೇ ಪ್ರತಿವಾದಿಯರು ನೋಂದಣಿ ಕಛೇರಿಗೆ ಹೋಗಿದ್ದು ಅಲ್ಲಿ ಪತ್ರ ಬರಹಗಾರರ ಕಡೆಯಿಂದ ಪತ್ರವನ್ನು ಓದಿಸಿಕೊಂಡು ನಂತರ ನೋಂದಣಿ ಕಛೇರಿಯಲ್ಲಿ ರೂ.2 ಲಕ್ಷ ಹಣವನ್ನು ನಾನು ಪಡೆದುಕೊಂಡು ನಂತರ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಉಪನೋಂದಣಾಧಿಕಾರಿಗಳು ಹಕ್ಕು ಖುಲಾಸೆ ಪತ್ರದಲ್ಲಿ ವಿಚಾರವನ್ನು ಓದಿ ಹೇಳಿದ್ದು ನಂತರ ರೂ.2 ಲಕ್ಷ ಹಣವನ್ನು ಪಡೆದುಕೊಂಡ ನಂತರ ಈ ಹಕ್ಕು ಖುಲಾಸೆ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಣ ಸಂದಾಯವಾಗಿರುವ ಬಗ್ಗೆ ಹಕ್ಕು ಖುಲಾಸೆ ಪತ್ರದಲ್ಲಿ ಇರುವ ಸಾಕ್ಷಿದಾರರಾದ ಹಂಪಾಪುರ ಗ್ರಾಮದ ಚಂದ್ರ ಮತ್ತು ಕಾಳೇಗೌಡ ರವರುಗಳು ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ.

ಹಕ್ಕು ಖುಲಾಸೆ ಪತ್ರಕ್ಕೆ ಸಹಿ ಮಾಡುವ ಸಂದರ್ಭದಲ್ಲಿ 1 ರಿಂದ 4 ಮತ್ತು 6ನೇ ಪ್ರತಿವಾದಿಗಳು ಹಾಗೂ ಸಾಕ್ಷಿದಾರರಾದ ಚಂದ್ರ ಮತ್ತು ಕಾಳೇಗೌಡ ರವರುಗಳು ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾನ ಪತ್ರ ಬರೆದುಕೊಡುತ್ತಾರೆ ಎಂದು ನನ್ನ ಅಣ್ಣ ನನ್ನನ್ನು ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಪತ್ರ ಬರಹಗಾರರು ಇದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.